**<u>ದಿನಾಂಕಃ 07.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ ಎದುರುದಾರರ ಪರ ಎಸ್ ಜಿ ವಕೀಲರಿಂದಃ</u>**

ನಾನು ಮದುವೆ ಆಗುವ ಮೊದಲು ಕಿಸಾನ್ ಕಾಲ್ ಸೆಂಟರ್ ನಲ್ಲಿ coordinator ಕೆಸಲ ಮಾಡುತ್ತಿದ್ದೆ. ನನ್ನ ಸ್ವಂತ ಊರು ಬೆಳ್ಳೂರು ಕ್ರಾಸ್ ನಲ್ಲಿ ಇರುವ ಮಂಚೇನಹಳ್ಳಿ, ನಾನು ಹುಟ್ಟಿ ಬೆಳೆದಿದ್ದು ಅದೇ ಊರಿನಲ್ಲಿ. ನನ್ನ ತಂದೆಗೆ ನಾವು 4 ಜನ ಮಕ್ಕಳು. ಇಬ್ಬರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ನನ್ನ ಹಿರಿಯ ಸಹೋದರ ಪೊಲೀಸ್ ಇಲಾಖೆಯಲ್ಲಿ ಇದ್ದಾರೆ. ನನ್ನ ಇಬ್ಬರು ಹಿರಿಯ ಸಹೋದರಿಯರು ವಿವಾಹಿತರು ಅವರ ಗಂಡನ ಮನೆಯಲ್ಲಿ ಇದ್ದಾರೆ. ಎದುರುದಾರಳನ್ನು ಹೊಸ ಸಂಬಂಧವಾಗಿ ಮದುವೆ ಆಗಿರುತ್ತೇನೆ. ನಮ್ಮ ಸಂಬಂಧಿಕರಾದ ಪ್ರೇಮ ಹಾಗೂ ಅಯ್ಯಣ್ಣ ಎನ್ನುವವರು ಎದುರುದಾರಳನ್ನು ತೋರಿಸಿರುತ್ತಾರೆ. ಎದುರುದಾರಳನ್ನು ನಾನು ಮನಸ್ಪೂರಕವಾಗಿ ಒಪ್ಪಿ ಮದುವೆ ಆಗಿರುತ್ತೇನೆ. ಮದುವೆ ಆದಾಗಿನಿಂದಲೂ ಚೆನ್ನಾಗಿದ್ದೆವು 9 ವರ್ಷ ಸಂಸಾರ ಮಾಡಿರುತ್ತೇವೆ. ನಮಗೆ ಮದುವೆ ಆದ ಒಂದು ವರ್ಷಕ್ಕೆ ಗಂಡು ಮಗು ಜನಿಸಿರುತ್ತದೆ. ಹಿಂದೂ ಸಂಪ್ರದಾಯದ ಪ್ರಕಾರ ಚನ್ನರಾಯಪಟ್ಟಣ ದ ಜವರಮ್ಮ ಕಲ್ಯಾಣ ಮಂಟಪದಲ್ಲಿ ನನ್ನ ಮತ್ತು ಎದುರುದಾರಳ ವಿವಾಹ ಆಗಿರುತ್ತದೆ ಎಂದರೆ ಹೌದು. ವಿವಾಹಕ್ಕೆ ಮೊದಲು ನನ್ನ ಮತ್ತು ಎದುರುದಾರಳ ನಡುವೆ ನಿಶ್ಚಿತಾರ್ಥ ಆಗಿದೆ ಎಂದರೆ ಹೌದು. ಮದುವೆ ಮಾತುಕತೆ ಆದ ಒಂದು ತಿಂಗಳ ನಂತರ ನಿಶ್ಚಿತಾರ್ಥ ಆಗಿರುತ್ತದೆ. ನಿಶ್ಚಿತಾರ್ಥ ಆದ ನಂತರ ನನ್ನ ಮತ್ತು ಎದುರುದಾರಳ ದೂರವಾಣಿ ಸಂಖ್ಯೆಗಳನ್ನು ವಿನಿಮಯ ಮಾಡಿಕೊಂಡಿರುತ್ತೇವೆ. ನಾನು ಮತ್ತು ಆಕೆ ಚೆನ್ನಾಗಿ ಮಾತನಾಡುತ್ತಿದ್ದೆವು ಎಂದರೆ ನಾನು ದೂರವಾಣಿ ಕರೆ ಮಾಡಿದಾಗ ಆಕೆ ಸರಿಯಾಗಿ ಪ್ರತಿಕ್ರಿಯಿಸುತ್ತಿರಲಿಲ್ಲ. ನಿಶ್ಚಿತಾರ್ಥವಾದ ನಂತರ ನಾನು ಎದುರುದಾರಳಿಗೆ ದೂರವಾಣಿ ಕರೆ ಮಾಡಿದಾಗಲೆಲ್ಲಾ ಎಂಗೇಜ್ ಸೌಂಡ್ ಬರುತ್ತಿತ್ತು ಎಂದು ನಾನೇನೂ ನನ್ನ ಅರ್ಜಿಯಲ್ಲಿ ಹೇಳಿಲ್ಲ.

ನನ್ನ ಫೋನ್ ಕಾಲ್ ಗಳನ್ನು ಆಕೆ ಸಂಪರ್ಕ ಕಡಿತಗೊಳಿಸುತ್ತಿದ್ದಳು ಮತ್ತು ಪುನಃ ಕರೆ ಮಾಡುತ್ತಿರಲಿಲ್ಲ ಎಂದು ನನ್ನ ಅರ್ಜಿಯಲ್ಲಿ ಹೇಳಿರುತ್ತೇನೆ. ವಿವಾಹ ಆಗುವ ಮೊದಲು ಈ ಸಂಗತಿಗಳನ್ನು ಎದುರುದಾರಳ ಮನೆಯವರಿಗಾಗಲೀ ನಿಮಗೆ ಸಂಬಧಪಟ್ಟವರಿಗಾಗಲಿ ತಿಳಿಸಿದ್ದಿರಾ ಎಂದರೆ ತಿಳಿಸಿದ್ದೆನೆ. ಎದುರುದಾರಳ ತಂದೆ ತಾಯಿ ಏನು ಹೇಳಿರುತ್ತಾರೆ ಎಂದರೆ ಎದುರುದಾರಳಿಗೆ ಸ್ವಲ್ಪ ನಾಚಿಕೆ ಸ್ವಭಾವ ಜಾಸ್ತಿ ಇದೆ ಎಂದು ಆಕೆ ತಾಯಿ ಹೇಳಿರುತ್ತಾರೆ. ಮೊದಲು ನನಗೆ ಹಾಗೆ ಇರುತ್ತಾಳೆ ನಂತರ ಸರಿ ಹೋಗುತ್ತಾಳೆ ಎಂದು ಹೇಳಿರುತ್ತಾರೆ. ನಾನು agriculture engineering ಓದಿದ್ದೇನೆ. ಮದುವೆ ಕಾಲಕ್ಕೆ ಎದುರುದಾರಳು ಎಂ ಎ ಬಿ ಎಡ್ ಮಾಡಿದ್ದಳು.

ಮದುವೆ ಆದ ನಂತರ ಬೆಂಗಳೂರಿನಲ್ಲಿ ಇರುವ ನಮ್ಮ ಒಟ್ಟು ಕುಟುಂಬದ ಮನೆಯಲ್ಲಿ ನಾನು ಮತ್ತು ಎದುರುದಾರಳು ವಾಸವಾಗಿದ್ದೆವು ಎಂದರೆ ಹೌದು. ಆ ಸಂದರ್ಭದಲ್ಲಿ ನಮ್ಮ ಮನೆಯಲ್ಲಿ ನನ್ನ ಅವಿವಾಹಿತ ಸಹೋದರಿಯರು ಇದ್ದರು ಎಂದರೆ ಸರಿಯಲ್ಲ. ನಾವು ವಾಸ ಇದ್ದಂತ ಮನೆ ನಮ್ಮ ತಂದೆ ತಾಯಿಯ ಸ್ವಂತ ಮನೆ ಆಗಿರುತ್ತದೆ. ನನ್ನ ತಂದೆ ಅಧಿಕಾರಿಯಾಗಿ ಕೆಲಸದಲ್ಲಿ ಇದ್ದು ನಂತರ ನಿವೃತ್ತರಾಗಿರುತ್ತಾರೆ. ಪೊಲೀಸ್ ಇಲಾಖೆಯಲ್ಲಿ ಇದ್ದ ನನ್ನ ಸಹೋದರ ಸಹ ನಮ್ಮ ಜೊತೆ ಇದ್ದ ಎಂದರೆ ಸರಿಯಲ್ಲ ಅವನು ಉಲ್ಲಾಳ ಉಪನಗರದಲ್ಲಿ ವಾಸ ಇದ್ದ. ನನ್ನ ಅಣ್ಣನ ಹೆಂಡತಿ ಸಹ ಚನ್ನರಾಯಪಟ್ಟಣ ದ ನುಗ್ಗೆಹಳ್ಳಿಯವರು. ನನ್ನ ಅಣ್ಣನ ವಿರುದ್ದ ಸಹ ಆತನ ಪತ್ನಿ ಚನ್ನರಾಯಪಟ್ಟಣ ದ ನ್ಯಾಯಾಲಯದಲ್ಲಿ ವಿಚ್ಛೇದನ, ಜೀವನಾಂಶ, ವರದಕ್ಷಿಣೆ ಕಿರುಕುಳಗಳಿಗೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಿಸಿದ್ದರು ಎಂದರೆ ಹೌದು ನನಗೆ ಕೇಸ್ ನಂಬರ್ ಗಳು ಗೊತ್ತಿಲ್ಲ. ಮದುವೆ ಆದ 2 ದಿನಕ್ಕೆ ದಿಃ 10.06.2012 ರಲ್ಲಿ ಬೀಗರ ಔತಣ ಸಹ ಏರ್ಪಡಿಸಲಾಗಿತ್ತು ಎಂದರೆ ಸರಿ. ನಿಶ್ಚಿತಾರ್ಥವಾದ ಒಂದು ತಿಂಗಳ ನಂತರ ಮದುವೆ ಆಗಿರುತ್ತದೆ. ಎದುರುದಾರಳು ಸಂಬಂಧಿಕರೊಂದಿಗೆ ಬೆರೆಯುತ್ತಿರಲಿಲ್ಲ ಮಾತನಾಡುತ್ತಿರಲಿಲ್ಲ ಅದರಿಂದ ಮುಜುಗರವಾಗಿರುತ್ತದೆ ಎಂದು ನನ್ನ ಅರ್ಜಿಯಲ್ಲಿ ಬರೆಸಿದ್ದೆನೆ ಎಂದರೆ ಹೌದು. ಎದುರುದಾರಳು

ಸಂಬಂಧಿಕರಿಗೆ  ಪರಿಚಯಿಸಲು ಕರೆದರೆ ಮುಂದಾಗುತ್ತಿರಲಿಲ್ಲ ಜೊತೆಯಲ್ಲಿ ಎಲ್ಲಿಗೂ ಸಹ ಬರುತ್ತಿರಲಿಲ್ಲ.  ಬೀಗರ ಔತಣ ದಿನವೇ ನಿಶೇಕಪ್ರಸ್ತವನ್ನು ಎದುರುದಾರಳ ತವರು ಮನೆ ಅಂದರೆ ಚನ್ನರಾಯಪಟ್ಟಣ  ದಲ್ಲೇ ಮಾಡಿರುತ್ತಾರೆ. ಬೀಗರ  ಔತಣ ಮುಗಿಸಿ ಸಂಜೆ 4.00 ಗಂಟೆಗೆ ಅಲ್ಲಿಗೆ ಬಂದಿರುತ್ತೇವೆ.  ನಿಶೇಕಪ್ರಸ್ತದ ದಿನ  ಎದುರುದಾರಳೊಂದಿಗೆ  ಯಾವುದೇ ವಿಶೇಷ ಮಾತುಕತೆ ಆಗಿರಲಿಲ್ಲ. ನನ್ನೊಂದಿಗೆ ನನ್ನ ಸ್ನೇಹಿತರು ಬಂದಿರಲಿಲ್ಲ ನಾನು ಒಬ್ಬನೇ ಹೋಗಿದ್ದೆ.  ಆ ದಿನ ಊಟೋಪಚಾರವನ್ನೆಲ್ಲಾ  ಸರಿಯಾಗಿ ಎದುರುದಾರಳ ಮನೆಯವರು ಮಾಡಿರುತ್ತಾರೆ. ಎದುರುದಾರಳು ಮತ್ತು ನನ್ನ ನಡುವೆ ಆ ದಿನ ಸಂಭಾಷಣೆ ಸುಮಾರು ಅರ್ಧ ಗಂಟೆ ಆಗಿರುತ್ತದೆ ಆದರೆ ಎದುರುದಾರಳು ಯಾವುದೇ ರೀತಿಯಲ್ಲಿ ಉತ್ತರ ಕೊಡುತ್ತಿರಲಿಲ್ಲ ನನ್ನ ತಾಯಿ ಹೇಗೆ ಹೇಳುತ್ತಾರೋ ಹಾಗೆ ಕೇಳುತ್ತೆನೆ ಎಂದು ಹೇಳಿರುತ್ತಾಳೆ.

**(ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಪಾಟೀಸವಾಲಿಗೆ ಸಮಯ ನೀಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ